ಆ) ಬಂದಿದ್ದಲ್ಲಿ, ಬರಗಾಲದ ಅಂತಹ ಕ್ಲಿಷ್ಟಕರ ಸಂದರ್ಭದಲ್ಲಿ ರೈತರ ವಿದ್ಯುತ್ ಸಂಪರ್ಕ ಕಡಿತಗೊಳಿಸದಿರಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಈ ಸಂಪರ್ಕವನ್ನು ಕಡಿತ ಗೊಳಿಸದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದೇ;

ಇದು ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1110(1542)**

ಮಾನ್ಯ ಸದಸ್ಯರ ಹೆಸರು : **ಶ್ರೀ.ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ)**

ಉತ್ತರಿಸುವ ಸಚಿವರು : **ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)**

ಅ) ಶರಾವತಿ ಹಿನ್ನೀರಿನ ಪ್ರದೇಶವಾದ ಹಸಿರು ಗ್ರಾಮಕ್ಕೆ ಕೇ.ಬಿ.ಸರ್ಕಲ್ ಮಧ್ಯೆ ಸೇತುವೆ ಇಲ್ಲದೆ ಸಾರ್ವಜನಿಕರು ಪ್ರಯಾಣಿಸಲು ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಸೇತುವೆಯನ್ನು ಸರ್ಕಾರ ಇದುವರೆವಿಗೂ ನಿರ್ಮಿಸದಿರಲು ಕಾರಣವೇನು; ಇದಕ್ಕೆ ತಗಲುವ ವೆಚ್ಚವೆಷ್ಟು;

ಈ ಸೇತುವೆ ನಿರ್ಮಾಣವನ್ನು ತೆಗೆದುಕೊಳ್ಳಲು ರೂ.30.00 ಕೋಟಿಗಳಾಗುವುದೆಂದು ಅಂದಾಜಿಸಲಾಗಿದ್ದು, ಅನುದಾನದ ಲಭ್ಯತೆಗನುಸಾರವಾಗಿ ತೆಗೆದುಕೊಳ್ಳಲಾಗುವುದು.

ಇ) ಸೇತುವೆ ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಸದರಿ ಸೇತುವೆಯನ್ನು ಅನುದಾನದ ಲಭ್ಯತೆಗನುಸಾರವಾಗಿ ತೆಗೆದುಕೊಳ್ಳಲಾಗುವುದು.

ಈ) ಯಾವಾಗ ನಿರ್ಮಿಸಲಾಗುವುದು (ವಿವರ ನೀಡುವುದು)?

ಮೇಲಿನಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.